# ಮಠದೊಳಗಣ ಬೆಕ್ಕು

ಹುಟ್ಟು–ಸಾವು, ಬಡತನ, ಶ್ರೀಮಂತಿಕೆ, ಉದ್ಯೋಗ, ಮದುವೆ ಮುಂತಾದ ಮನುಷ್ಯನ ಐಹಿಕ ಜೀವನದ ಸಂಗತಿಗಳು ದೇವರ ಸುಪರ್ದಿಗೆ ಒಳಪಟ್ಟಿದ್ದೆಂದು ಈಗಾಗಲೇ ಬಾಬಾಗಳು, ದೇವಮಾನವರು, ಜಗದ್ಗುರುಗಳು ತೀರ್ಮಾನಿಸಿದ್ದಾರೆ! ಮರ್ತ್ಯಲೋಕದಲ್ಲಿ ಜರುಗುವ ಸಕಲ ವಿದ್ಯಮಾನಗಳಿಗೂ ಪರಲೋಕದಲ್ಲಿರುವ ದೇವರೇ ಕಾರಣ ಎಂದಾದ ಮೇಲೆ ನಮಗಿನ್ನು ಈ ಬಾಬಾ, ದೇವಮಾನವ, ಜಗದ್ಗುರುಗಳ ಅವಶ್ಯಕತೆ ಇದೆಯೆ? ರೋಗ, ಮುಪ್ಪು, ಸಾವು ಎಲ್ಲರಿಗೂ ಬರುವಂತೆ ತಮಗೂ ಬರುತ್ತದೆಂದು ಈ ದೇವಮಾನವರಿಗೆ ತಿಳಿಯದ ವಿಚಾರವೆ? ಹೀಗಿದ್ದೂ ಇವರು ಎಲ್ಲರನ್ನೂ ಮರುಳು ಮಾಡುತ್ತಿರುವುದೇಕೆ? ಎಂದು ಸಮಾಜ ಕೇಳಬೇಕಾಗಿದೆ. 'ದೇವರ ಬಳಿಗೆ ಹೋಗುವ ಮಾರ್ಗಗಳು ಆಕಾಶದಲ್ಲಿರುವ ನಕ್ಷತ್ರಗಳಂತೆ ಅಸಂಖ್ಯ' ಆದ್ದರಿಂದ ಜಗದ್ಗುರುಗಳು, ದೇವಮಾನವರು, ಬಾಬಾಗಳು, ಪಾದ್ರಿ, ಮುಲ್ಲಾಗಳು ದೇವರೆಡೆಗೆ ಹೋಗಲು ತೋರುವ ದಾರಿ ಒಂದೇ ಅಲ್ಲ! ಇಂತಹ ನೂರಾರು ರೂಪದ ದಾರಿಗಳಿವೆ. ಇಷ್ಟಕ್ಕೂ 'ಒಬ್ಬನ ದರ್ಶನ ಇನ್ನೊಬ್ಬನಿಗೆ ರೆಕ್ಕೆಗಳನ್ನು ಕೊಡಲಾರದು' ಎಂದು ಖಲೀಲ್ ಗಿಬ್ರಾನ್ ಹೇಳಿದ್ದಾನೆ. ಇದು ನಾವೇ ಕಂಡುಕೊಳ್ಳಬೇಕಾದ ದಾರಿ! ನಮ್ಮ ಕಾಲುಗಳಿಂದಲೇ ನಡೆಯಬೇಕಾದ ದಾರಿ. ಈ ಅರಿವು ನಮಗಿರಬೇಕು.

ಲೋಕದ ಎಲ್ಲ ಜೀವಿಗಳಿಗೂ ಒಳಿತನ್ನೇ ಬಯಸುವುದು ನಿಜವಾದ ಸಂತರ ಗುಣ. ಕೇವಲ ಒಂದು ಧರ್ಮದವರಿಗಲ್ಲ! ಅಥವಾ ಒಂದು ಜಾತಿ, ಒಳಜಾತಿ, ದೇಶದವರಿಗಲ್ಲ! ಸರ್ವಸಂಗ ಪರಿತ್ಯಾಗಿಗಳಾಗಿ, ಎಲ್ಲರ ಹಿತವನ್ನು ಕಾಯಬೇಕಾಗಿದ್ದ ಈ ದೇವಮಾನವರು ಈಗ ತಮ್ಮೊಳಗೆ ಜಾತಿ, ಗುಂಪು, ಬೃಹತ್ ಉದ್ಯಮಗಳನ್ನು ಸೃಷ್ಟಿಸಿಕೊಂಡು, ಒಂದು ಪ್ರಶ್ನಾತೀತ ವರ್ಗವಾಗಿ ರೂಪುಗೊಂಡಿದ್ದಾರೆ. ಸರ್ಕಾರ, ಕಾನೂನುಗಳು ಇವು ಜನಸಾಮಾನ್ಯರಿಗೆ ಮಾತ್ರ, ತಮಗಲ್ಲ ಎನ್ನುವ ಮನೋಭಾವ ಈ ವರ್ಗದವರಿಗೆ ಈಗಾಗಲೇ ಅಂಟಿದೆ. ಕೆಲವು ಬೆರಳೆಣಿಕೆಯ ಸಂತರನ್ನು ಬಿಟ್ಟರೆ, ಉಳಿದ ಬಹುಪಾಲು ಬಾಬಾಗಳು, ಜಗದ್ಗುರುಗಳು, ಮುಲ್ಲಾ, ಪಾದ್ರಿ ಮುಂತಾದ ದೇವಮಾನವರ ಶ್ವೇತ ವಸ್ತ್ರಕ್ಕೆ ಇಂದು ಲೌಕಿಕದ ಎಲ್ಲ ಮಸಿಗಳೂ ಮೆತ್ತಿಕೊಂಡಿವೆ. ಮನುಕುಲಕ್ಕೆ ಅಂಟಿರುವ ಶಾಶ್ವತ ಕಳಂಕಗಳಾದ ಅಸ್ಪೃಶ್ಯತೆ, ಹಸಿವು, ಬಡತನ, ಹಿಂಸೆ, ಕ್ರೌರ್ಯ, ತರತಮಭಾವದ ಬಗ್ಗೆ ಎಂದೂ ತುಟಿಬಿಚ್ಚದ, ಸತ್ತಿರುವ ಹಾಗೂ ಸಾಯುತ್ತಿರುವವರ ನಡುವೆ ಜೀವಿಸಿರುವ ಈ ಸಂತರು, ತಮ್ಮ ಜಾತಿ, ಒಳಜಾತಿಗೆ ವಿಶೇಷ ಸೌಲಭ್ಯ, ರಾಜಕೀಯ ಅಧಿಕಾರ ದೊರೆಯಬೇಕು ಎಂದು ಬಹಿರಂಗವಾಗಿ ತೀರ್ಪು ಕೊಡುವವರಂತೆ ಮಾತನಾಡುತ್ತಿದ್ದಾರೆ! ಕೇವಲ ತಮ್ಮ ಜಾತಿಯ ಹಿತವನ್ನಷ್ಟೇ ಬಯಸುವವರನ್ನು 'ಸಂತ'ರು ಎಂದು ಕರೆಯಲಾದೀತೆ? ಸ್ವತಃ ತಾವೇ ವಸ್ತುಪ್ರಪಂಚದ ಮಡುವಿನಿಂದ ಹೊರಬರಲಾಗದೆ ಸಿಲುಕಿಕೊಂಡಿರುವ ಇವರು, ಸಮಾಜವನ್ನು ಸಂಕಟಗಳಿಂದ ಹೇಗೆ ಪಾರುಮಾಡಬಲ್ಲರು! ಇಂತಹ ಡಾಂಭಿಕರನ್ನು ನೋಡಿಯೇ ಬೈಬಲ್ ಹೇಳಿದೆ, 'ಪ್ರಾರ್ಥನೆ ಮಾಡುವಾಗ ವೇಷಧಾರಿಗಳನ್ನು ಅನುಸರಿಸಬೇಡ' ಎಂದು.

ನಿಜವಾದ ಸಂತರು ಇರುವೆ ಮತ್ತು ರಾಜ ಇಬ್ಬರೂ ಒಂದೇ ಎಂದು ಭಾವಿಸುತ್ತಾರೆ. ಅವರಿಗೆ ಚಿನ್ನ ಮತ್ತು ಕಬ್ಬಿಣ ಎರಡೂ ಒಂದೇ ಸಮಾನ. ಈ ಬಾಬಾ, ಜಗದ್ಗುರು, ಮುಲ್ಲಾ, ಪಾದ್ರಿಗಳ ವೇಷಗಳೆಲ್ಲ ಆಕರ್ಷಿಸಲು ಮಾತ್ರ ಇರುವ ನವಿಲುಗರಿಗಳಂತೆ! ಆದ್ದರಿಂದಲೇ ಸೂಫಿ ಕವಿ ರೂಮಿ ಹೇಳಿದ: 'ಒಂದು ದಿನ ಸನ್ಯಾಸಿ ತನ್ನ ಹೊಲದಲ್ಲಿ ಉಳುಮೆಗೆ ಹೋದ, ಅಲ್ಲಿ ನವಿಲೊಂದನ್ನು ಕಂಡ, ಆ ನವಿಲು ತನ್ನ ಬಣ್ಣ ಬಣ್ಣದ ಗರಿಗಳನ್ನು ಕೊಕ್ಕಿನಿಂದ ಕಿತ್ತುಹಾಕುತ್ತಿತ್ತು. ನವಿಲಿನ ಈ ಹುಚ್ಚು ಆತ್ಮಘಾತುಕತನವನ್ನು ಕಂಡು ಸನ್ಯಾಸಿಗೆ ದಿಗ್ಭ್ರಮೆಯಾಯಿತು. ಕೇಳಿದ, ಏಕೀ ಆತ್ಮವಿನಾಶ? ನಿನ್ನೀ ಸೌಂದರ್ಯ ನಾಶ? ಏಕೀ ಕುರೂಪ? ನವಿಲು ಹೇಳಿತು, ನನ್ನ ಈ ಸುಂದರ ಗರಿಗಳೇ ನನ್ನೆಲ್ಲ ತೊಂದರೆಗೆ ಮೂಲ. ಗರಿಗಳ ವರ್ಣ ವೈವಿಧ್ಯ ಕಂಡು ಬೇಟೆಗಾರರು ನನ್ನ ಬೆನ್ನುಹತ್ತುತ್ತಿದ್ದರು. ಅದಕ್ಕಾಗಿ ಈ ಗರಿಗಳನ್ನು ನಾಶಮಾಡಿ ಕುರೂಪವಾಗುತ್ತಿದ್ದೇನೆ. ಈಗ ಬೇಟೆಗಾರರು ನನ್ನ ತಂಟೆಗೆ ಬರಲಾರರು!' ಅಂತಿಮವಾಗಿ 'ಸಂಕಟಗಳೇ ಸಿದ್ಧಿಗೆ ದಾರಿ' ಎಂದು ತಿಳಿದು 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' ಎಂದ ವಚನಕಾರರು ಲೌಕಿಕವನ್ನು ಅದು ಇರುವ ಹಾಗೆಯೇ ಸ್ವೀಕರಿಸಿದರು. ಸಂಪತ್ತಿನ ನೆರಳಿಗೂ ಅಂಟಿಕೊಳ್ಳದೆ ಲೌಕಿಕದ ಕಮ್ಮಟದಲ್ಲಿಯೇ ಬೆಂದು ಆಧ್ಯಾತ್ಮಿಕ ಸಾಧನೆಯ ಉನ್ನತಿಗೇರಿದರು. ಇಂಥ ಉನ್ನತವಾದ ಆಧ್ಯಾತ್ಮಿಕ ತಿಳಿವು ಈಗಿನ ಬಣ್ಣದ ಪುಕ್ಕಗಳಿರುವ ಸಂತರಿಗೆ ಬಂದದ್ದೇ ಆದರೆ, ಸಮಾಜ ಯಾವ ಊರುಗೋಲೂ ಇಲ್ಲದೆ ತನ್ನಪಾಡಿಗೆ ತಾನು ದೇವರ ರಾಜ್ಯದ ಕಡೆ ನಡೆಯುತ್ತದೆ.

'ಆಸೆಯನು ಕಿತ್ತೆಸೆ ಬೇರುಸಹಿತ / ಬಳಿಕ ಅವನಾಗಲಿ ಗೋಸಾವಿ / ತುಕಾರಾಮನೆಂದ ಯೋಗಿಯಾಗುವುದಾದರೆ / ಮೊದಲು ನಾಶಮಾಡು ಸಕಲ ಆಸೆ' ಎಂದು ಸಂತ ತುಕಾರಾಮ ಹೇಳಿದ. 'ದೀನ ದಲಿತರನ್ನಪ್ಪಿಕೊಳ್ಳುವವನೇ ನಿಜವಾದ ಸಂತನು'. ಮತ–ಧರ್ಮ ಜಾತಿಗಳನ್ನು ಮೀರಿ ಇಡೀ ಮಾನವ ಲೋಕದ ಹಿತಕ್ಕಾಗಿ ಶ್ರಮಿಸಬೇಕಾಗಿದ್ದ ಸಂತರು ಇಂದು ವಿಶ್ವಭ್ರಾತೃತ್ವದ ಪ್ರಜ್ಞೆಯೇ ಇಲ್ಲದ ಸಂಕುಚಿತವಾದಿಗಳಂತೆ ಕಾಣುತ್ತಾರೆ. ಇಂತಹ ಕಪಟಿಗಳ ಭಕ್ತಿಯನ್ನೇ ಕಂಡು ಜೇಡರ ದಾಸಿಮಯ್ಯ ಹೇಳಿದ 'ಬರುಸೆಟೆಗನ ಭಕ್ತಿ ದಿಟವೆಂದು ನಚ್ಚಲು ಬೇಡ / ಮಠದೊಳಗಣ ಬೆಕ್ಕು ಇಲಿಯ ಕಂಡು / ಪುಟನೆಗೆದಾಂತಾಯಿತ್ತು ಕಾಣಾ ರಾಮನಾಥ'. ಧಾರ್ಮಿಕ ಶಠತ್ವ, ಬೌದ್ಧಿಕ ತರ್ಕ, ಲೌಕಿಕ ಜಗತ್ತಿನ ಬಗೆಗಿನ ತೀವ್ರವಾದ ವ್ಯಸನ, ಸಂಪತ್ತು, ಕೀರ್ತಿ ಇವು ಇಂದಿನ ತೋರಾಣಿಕೆಯ ಸಂತರನ್ನು ದಾರಿತಪ್ಪಿಸಿವೆ.

ಇಂತಹ ದುರಂತಗಳನ್ನು ಅರಿತಿದ್ದ ನಮ್ಮ ವಚನಕಾರರು ಮತ್ತು ತತ್ವಸಾಧಕರು 'ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ!' ಎಂದು ದಿಟ್ಟವಾಗಿ ಹೇಳಿ ಪ್ರಭುತ್ವ ಮತ್ತು ಸಂಪತ್ತಿನಿಂದ ಸುರಕ್ಷಿತ ಅಂತರವನ್ನು ಕಾಯ್ದುಕೊಂಡಿದ್ದರು. ತತ್ವಸಾಧಕರಾಗಿದ್ದ ಬಾಲಲೀಲಾ ಮಹಾಂತ ಶಿವಯೋಗಿಗಳು ಮೈಸೂರು ಅರಸರಿಗೆ 'ಮೇಲೆ ಚೆಂದದ ಸುಖವು ಒಳಗೇನು ಸುಖವಿಲ್ಲ ಮೈಸೂರ ಮೈಚೂರವೋ' ಎಂದು ಅರಮನೆಯ ಸಿರಿತನವನ್ನು ಈಡಾಡಿ, ಅರಸರು ತಮಗಿತ್ತ 'ಛತ್ರ ಚಾಮರಗಳ ನಾನೆಲ್ಲಿ ಮಡಗಿಕೊಳ್ಳಲಿ' ಎಂದು ಅವರಿಗೇ ಹಿಂದಿರುಗಿಸಿ, ಬರಿ ಕುಂಬಳಕಾಯಿ ಬರುಡೆಯನ್ನಷ್ಟೇ ಸ್ವೀಕರಿಸಿದರಂತೆ!

■ ಜಿ.ವಿ. ಆನಂದಮೂರ್ತಿ

## ಮಾತೇ ಮುತ್ತು

- ಪ್ರತಿಭೆ ನಿಜವಾಗಿಯೂ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು. ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ತೆರೆಯುತ್ತದೆ.

  —ತೀ.ನಂ.ಶ್ರೀ.
- ಮಾನವ ಕೆಟ್ಟ ಕೆಲಸಗಳನ್ನು ಮಾಡಲು ಯೋಚಿಸುವುದಿಲ್ಲ. ಆದರೆ ಒಳ್ಳೆ ಕೆಲಸ ಮಾಡಲು ಬಹಳ ಯೋಚಿಸುತ್ತಾನೆ.

  —ಎಲ್.ಎಸ್. ಶೇಷಗಿರಿರಾವ್
- ಏನೂ ಅರಿಯೆನೆಂದು ಮೌನಗೊಂಡಿರಬೇಡ. ಕೂಡಲ ಸಂಗಮ ದೇವರ ಮುಂದೆ ದಂದಣ ಎನ್ನಿ, ದತ್ತಣ ಎನ್ನಿ.

  —ಬಸವಣ್ಣ
- ಭಾಷೆ ವೈಯಕ್ತಿಕವೂ ಹೌದು, ಸಾಮಾಜಿಕವೂ ಹೌದು– ಏಕಕಾಲಕ್ಕೆ.

  —ಗೋಪಾಲಕೃಷ್ಣ ಅಡಿಗ
- ನಾಳೆ ಎಂಬುವುದು ನಿನ್ನಿನ ಮನಸು, ಮುಂದೆ ಎಂಬುವುದು ಇಂದಿನ ಕನಸು. ರಸವೆ ಜನನ, ವಿರಸ ಮರಣ, ಸಮರಸವೇ ಜೀವನ!

  —ದ.ರಾ. ಬೇಂದ್ರೆ
- ಓದಿ ಮರುಳಾಗಬಾರದು; ಓದದೆಯೂ ಮರುಳಾಗಬಾರದು; ಓದಿನ ನಂತರ ಹುರುಳಾಗಬೇಕು.

  —ವಿ.ಕೃ. ಗೋಕಾಕ್
- ಯಾವ ಕನ್ನಡಿಗನ ಮನೆಯಲ್ಲಿ ಕೆಲವಾದರೂ ಕನ್ನಡ ಕೃತಿಗಳಿಲ್ಲವೋ, ಅದು ಕನ್ನಡಿಗನ ಮನೆಯೇ ಎಂದು ಪ್ರಶ್ನಿಸುವಂತೆ ಆಗಬೇಕು.

  —ಕಮಲಾ ಹಂಪನಾ